**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 161 |
| ಉತ್ತರಿಸಬೇಕಾದ ದಿನಾಂಕ | : | 16–07–2024 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಯಶಸ್ವಿನಿ ಯೋಜನೆ ಜಾರಿಯಲ್ಲಿದೆಯೇ: ಹಾಗಿದ್ದಲ್ಲಿ, ಪ್ರಸ್ತುತ ಎಷ್ಟು ಜನರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ: (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) | ಹೌದು, ಪ್ರಸ್ತುತ ಪರಿಷ್ಕೃತ ಯಶಸ್ವಿನಿ ಯೋಜನೆ ಜಾರಿಯಲ್ಲಿರುತ್ತದೆ.<br><br>2023–24ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿ 41.54 ಲಕ್ಷ ಫಲಾನುಭವಿಗಳು ನೋಂದಾಯಿಸಿಕೊಂಡಿರುತ್ತಾರೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ಈ ಯೋಜನೆಯಡಿಯಲ್ಲಿ ಎಷ್ಟು ರೂಪಾಯಿಯವರೆಗೂ ಚಿಕಿತ್ಸೆಯನ್ನು ಪಡೆಯಬಹುದು; | ಯಶಸ್ವಿನಿ ಪ್ರೋಟೋಕಾಲ್‌ನಂತೆ ನಿಗದಿಪಡಿಸಿರುವ ಅರ್ಹ ಚಿಕಿತ್ಸೆಗಳ ಪ್ಯಾಕೇಜಿನ ದರದ ಮಿತಿಗೆ ಒಳಪಟ್ಟು ಫಲಾನುಭವಿ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸೆಯ ವೆಚ್ಚದ ಗರಿಷ್ಠ ಮಿತಿ ರೂ.5.00 ಲಕ್ಷ ಇರುತ್ತದೆ. |
| ಇ) | ವಿಮೆ ಹಣ ತುಂಬಿದರೂ ಆರೋಗ್ಯ ಚೀಟಿ ಸಿಗದ ಕಾರಣ ಪರದಾಡುವಂತಹ ಸ್ಥಿತಿ ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

| | | |
|---|---|---|
| ಈ) | ಹೆಸರು ನೋಂದಾಯಿಸಿದವರ ಪೈಕಿ ಶೇಕಡಾ 45 ಜನರಿಗೆ ಯುನಿಕ್ ಐಡಿ ಸಂಖ್ಯೆಯುಳ್ಳ ಪ್ಲಾಸ್ಟಿಕ್ ಕಾರ್ಡ್‌ಗಳನ್ನು ಈವರೆಗೂ ನೀಡಿಲ್ಲದಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಇದರ ಬಗ್ಗೆ ತೆಗೆದುಕೊಂಡ ಕ್ರಮಗಳಾವುವು: | 2023–24ನೇ ಸಾಲಿಗೆ ಯಶಸ್ವಿನಿ ಯೋಜನೆಯಡಿ ಸದಸ್ಯರ ನೋಂದಣಿಯನ್ನು ದಿನಾಂಕ:01–01–2024 ರಿಂದ 31–03–2024 ರವರೆಗೆ ನಿಗದಿಪಡಿಸಲಾಗಿತ್ತು. ಈ ಅವಧಿಯಲ್ಲಿ ನೋಂದಾಯಿಸಿಕೊಂಡ ಸದಸ್ಯರಿಗೆ ದಿನಾಂಕ:01–04–2024 ರಿಂದ 31–03–2025 ರ ಅವದಿಗೆ ಚಿಕಿತ್ಸೆಯನ್ನು ನಿಗದಿಗೊಳಿಸಲಾಗಿದೆ. ಯೋಜನೆಯಲ್ಲಿ ಸದಸ್ಯತ್ವ ನೋಂದಣಿಗೆ ನಿಗದಿ ಪಡಿಸಿದ ಗಡುವು ದಿನಾಂಕ:31–03–2024 ಮುಕ್ತಾಯವಾದ ಮರುದಿನದಿಂದಲೇ ಚಿಕಿತ್ಸೆಗೆ ಅವಕಾಶ ಕಲ್ಪಿಸಿದ್ದರಿಂದ ಮತ್ತು ಏಪ್ರಿಲ್ ಮಾಹೆಯಲ್ಲಿ ಸಾರ್ವತ್ರಿಕ ಚುನಾವಣೆ ಪ್ರಕ್ರಿಯೆಗಳು ಪ್ರಾರಂಭವಾಗಿದ್ದರಿಂದ ಪ್ರಾರಂಭಿಕ ದಿನಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಡುಗಳ ವಿತರಣೆ ಸಾಧ್ಯವಾಗಿರುವುದಿಲ್ಲ.<br><br>ಆದಾಗ್ಯೂ ಈ ಯೋಜನೆಯಡಿ ನೋಂದಾಯಿಸಿಕೊಂಡ ಸದಸ್ಯರು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ತೆರಳಿದಾಗ ಪ್ಲಾಸ್ಟಿಕ್ ಕಾರ್ಡು ಒದಗಿಸದಿದ್ದರೂ, ಸದಸ್ಯರು ಯೋಜನೆಯಡಿ ನೋಂದಾಯಿಸಿಕೊಂಡ ಸಹಕಾರ ಸಂಘದಿಂದ ನೋಂದಾಯಿಸಿಕೊಂಡಿರುವ ಬಗ್ಗೆ ದೃಢೀಕರಣ ಪತ್ರ, ವಂತಿಗೆ ಪಾವತಿಸಿರುವ ಬಗ್ಗೆ ರಶೀದಿ ಪಡೆದು ಆಯಾ ಜಿಲ್ಲಾ ಉಪ ನಿಬಂಧಕರು ಆನ್ ಲೈನ್ ಮೂಲಕ ತುರ್ತು ಕಾರ್ಡು ವಿತರಿಸಲು ಟ್ರಸ್ಟ್‌ಗೆ ಪ್ರಸ್ತಾವನೆ ಸಲ್ಲಿಸುತ್ತಿದ್ದು, 24 ಘಂಟೆಯೊಳಗೆ Emergency Card ಅನ್ನು ಆನ್ ಲೈನ್ ಮೂಲಕ ಫಲಾನುಭವಿಗೆ ಮತ್ತು ಆಸ್ಪತ್ರೆಗೆ ಕಳುಹಿಸುವ ವ್ಯವಸ್ಥೆಯನ್ನು 1ನೇ ಏಪ್ರಿಲ್‌ನಿಂದಲೇ ಮಾಡಿರುವುದರಿಂದ ತುರ್ತು ಚಿಕಿತ್ಸೆಗೆ ಯಾವುದೇ ತೊಂದರೆಯಾಗದಂತೆ ಯಶಸ್ವಿನಿ ಟ್ರಸ್ಟ್ ಮೂಲಕ ಸರ್ಕಾರವು ವ್ಯವಸ್ಥೆ ಮಾಡಲಾಗಿದೆ. ಇದರಿಂದಾಗಿ ಚಿಕಿತ್ಸಾ ಪ್ರಾರಂಭಿಕ ಒಂದೇ ತಿಂಗಳಲ್ಲಿ ಅಂದರೆ ಏಪ್ರಿಲ್ 2024 ಮಾಹೆಯಲ್ಲಿ 3204 ಫಲಾನುಭವಿಗಳು ರೂ.7.37 ಕೋಟಿ ಮೊತ್ತದ ಚಿಕಿತ್ಸೆಯನ್ನು ಪಡೆದಿರುತ್ತಾರೆ. |

| | | |
|---|---|---|
| | | ಅದೇ ರೀತಿ ಏಪ್ರಿಲ್ 2024 ರಿಂದ ಜೂನ್ 2024 ರವರೆಗಿನ ಮೂರು ತಿಂಗಳ ಅವಧಿಯಲ್ಲಿ 17,000 ಫಲಾನುಭವಿಗಳು ರೂ.32.00 ಕೋಟಿ ಮೊತ್ತದ ಚಿಕಿತ್ಸೆಯನ್ನು ಅಡಚಣೆಯಿಲ್ಲದೆ ಪಡೆದಿರುತ್ತಾರೆ.<br><br>ಮುಂದುವರೆದು ಯಶಸ್ವಿನಿ ಯೋಜನೆಯಡಿ ನೋಂದಾಯಿಸಿಕೊಂಡಿರುವ ಪ್ರತಿ ಫಲಾನುಭವಿ ಕುಟುಂಬಕ್ಕೆ ಒಂದು ಪ್ಲಾಸ್ಟಿಕ್ ಐಡಿ ಕಾರ್ಡ್ ನೀಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಸುಮಾರು 11.22 ಲಕ್ಷ ಕುಟುಂಬಗಳ ಸುಮಾರು 41.54 ಲಕ್ಷ ಸದಸ್ಯರು ನೋಂದಾಯಿಸಿಕೊಂಡಿದ್ದು, ಈ ಪೈಕಿ 11.13 ಲಕ್ಷ ಕುಟುಂಬಗಳ ಕಾರ್ಡುಗಳು ಡೇಟಾ ಎಂಟ್ರಿ ಮುಗಿದಿದ್ದು, ಇಲ್ಲಿಯವರೆಗೆ 10.84 ಲಕ್ಷ ಕಾರ್ಡುಗಳನ್ನು ಜಿಲ್ಲೆಗಳಿಗೆ ವಿತರಿಸಲಾಗಿದೆ. ಅಂದರೆ ಸುಮಾರು ಶೇ.97 ರಷ್ಟು ಫಲಾನುಭವಿ ಕುಟುಂಬಗಳಿಗೆ ಈಗಾಗಲೇ ಕಾರ್ಡ್ ವಿತರಿಸಲಾಗಿದೆ.<br><br>ಫಲಾನುಭವಿಗಳು ಆಧಾರ್ ಕಾರ್ಡ್ ಸಲ್ಲಿಸದಿರುವುದು, ಮೊಬೈಲ್ ಸಂಖ್ಯೆ ಒದಗಿಸದಿರುವುದು, ಫೋಟೋ ಸಲ್ಲಿಸದಿರುವುದು, ಆರ್‌ಡಿ ಸಂಖ್ಯೆ ಇಲ್ಲದಿರುವುದು ಮತ್ತು ಯಶಸ್ವಿನಿ ಯೋಜನೆಯಲ್ಲಿ ವ್ಯಾಖ್ಯಾನಿಸಿರುವ ಕುಟುಂಬ ಸದಸ್ಯರನ್ನು ಹೊರತಾದ ಸದಸ್ಯರನ್ನು ಸೇರಿಸಿರುವುದು, ಒಂದಕ್ಕಿಂತ ಹೆಚ್ಚಿನ ಸಂಘಗಳಲ್ಲಿ ಫಲಾನುಭವಿಗಳು ಸೇರ್ಪಡೆ ಆಗಿರುವುದು ಇತ್ಯಾದಿ ಕಾರಣಗಳಿಗಾಗಿ 10,000 ಕುಟುಂಬಗಳ ಕಾರ್ಡು ಡೇಟಾ ಎಂಟ್ರಿ ಮಾಡಲು ಸಾಧ್ಯವಾಗಿರುವುದಿಲ್ಲವೆಂದು ಕಾರ್ಡು ಮುದ್ರಣಕಾರರು ವರದಿ ಮಾಡಿರುತ್ತಾರೆ. ಈ ದೋಷಗಳನ್ನು ಜಿಲ್ಲಾವಾರು ಪರಿಶೀಲಿಸಿ ಅರ್ಹ ಫಲಾನುಭವಿಗಳೆಂದು ದೃಢಪಟ್ಟಲ್ಲಿ ಅಂತಹ ಎಲ್ಲಾ ಅರ್ಹ ಸದಸ್ಯರಿಗೆ ಕಾರ್ಡು ವಿತರಿಸಲು ಕ್ರಮವಿಡಲಾಗುತ್ತಿದೆ. ಯೋಜನೆಯ ಎಲ್ಲಾ ಅರ್ಹ ಫಲಾನುಭವಿಗಳು ಚಿಕಿತ್ಸೆ ಪಡೆಯಲು ವಂಚಿತರಾಗದಂತೆ ಈಗಾಗಲೇ ಸರ್ಕಾರದಿಂದ ಕ್ರಮವಹಿಸಲಾಗಿದೆ. |

| | | |
|---|---|---|
| ಉ) | ಆರೋಗ್ಯ ಕಾರ್ಡ್ ಇಲ್ಲದಿರುವುದರಿಂದ ರೋಗಿಗಳು ಚಿಕಿತ್ಸೆ ಪಡೆದುಕೊಳ್ಳಲು ಪರದಾಡುವಂತಹ ಪರಿಸ್ಥಿತಿ ಎದುರಾಗಿರುವುದು ನಿಜವೇ: | ಅಂತಹ ಪ್ರಕರಣಗಳು ಇರುವುದಿಲ್ಲ. |
| ಊ) | ಯಶಸ್ವಿನಿ ಯೋಜನೆಯಡಿಯಲ್ಲಿ ರೈತರಲ್ಲದೆ, ನಗರ ಭಾಗದಲ್ಲಿ ಸಹಕಾರ ಸಂಘಗಳಲ್ಲಿ ಷೇರನ್ನು ಹೊಂದಿರುವವರಿಗೂ ಸಹ ಈ ಯೋಜನೆಯ ಫಲಾನುಭವಿಗಳಾಗಲು ಅವಕಾಶವಿದೆಯೇ? | ಪ್ರಸ್ತುತ ಯಶಸ್ವಿನಿ ಯೋಜನೆಯಲ್ಲಿ ಗ್ರಾಮೀಣ ಸಹಕಾರ ಸಂಘಗಳ ಸದಸ್ಯರಲ್ಲದೇ, ನಗರ ಭಾಗದ ಸಹಕಾರ ಸಂಘಗಳಲ್ಲಿ ಷೇರನ್ನು ಹೊಂದಿರುವವರಿಗೂ ಸಹ ಯೋಜನೆಯ ಫಲಾನುಭವಿಗಳಾಗಲು ಅವಕಾಶವಿರುತ್ತದೆ. |

**ಸಂಖ್ಯೆ: ಸಿಒ 152 ಸಿಎಲ್‌ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ಅನುಬಂಧ 1

| ಯಶಸ್ವಿನಿ ಯೋಜನೆಯಲ್ಲಿ 2023-24 ನೇ ಸಾಲಿನಲ್ಲಿ ನೊಂದಣೆಯಾದ ಸದಸ್ಯರ ವಿವರ | | |
|---|---|---|
| | | (ತಾತ್ಕಾಲಿಕ) |
| ಕ್ರ. ಸಂಖ್ಯೆ | ಜಿಲ್ಲೆ | ಒಟ್ಟು ಸದಸ್ಯರು |
| 1 | ಬೆಂಗಳೂರು ವಲಯ-1 | 50860 |
| 2 | ಬೆಂಗಳೂರು ವಲಯ-2 | 29624 |
| 3 | ಬೆಂಗಳೂರು ವಲಯ-3 | 42765 |
| 4 | ಬೆಂಗಳೂರು ವಲಯ-4 | 54502 |
| 5 | ಬೆಂಗಳೂರು ಗ್ರಾಮಾಂತರ | 103846 |
| 6 | ರಾಮನಗರ | 145172 |
| 7 | ತುಮಕೂರು | 254479 |
| 8 | ಕೋಲಾರ | 91914 |
| 9 | ಚಿಕ್ಕಬಳ್ಳಾಪುರ | 80441 |
| 10 | ಚಿತ್ರದುರ್ಗ | 122292 |
| 11 | ದಾವಣಗೆರೆ | 160709 |
| 12 | ಶಿವಮೊಗ್ಗ | 195595 |
| 13 | ಮೈಸೂರು | 331961 |
| 14 | ಚಾಮರಾಜನಗರ | 102346 |
| 15 | ಮಂಡ್ಯ | 270754 |
| 16 | ಹಾಸನ | 189459 |
| 17 | ಚಿಕ್ಕಮಗಳೂರು | 127078 |
| 18 | ಕೊಡಗು | 78219 |
| 19 | ದಕ್ಷಿಣ ಕನ್ನಡ | 215120 |
| 20 | ಉಡುಪಿ | 73298 |
| 21 | ಬೆಳಗಾವಿ | 271411 |
| 22 | ವಿಜಯಪುರ | 99630 |
| 23 | ಬಾಗಲಕೋಟೆ | 174410 |
| 24 | ಧಾರವಾಡ | 54330 |
| 25 | ಗದಗ | 59360 |
| 26 | ಹಾವೇರಿ | 99506 |
| 27 | ಉತ್ತರ ಕನ್ನಡ | 113063 |
| 28 | ಬಳ್ಳಾರಿ | 59709 |
| 29 | ಬೀದರ್ | 121926 |
| 30 | ಕಲಬುರಗಿ | 65621 |
| 31 | ಕೊಪ್ಪಳ | 78044 |
| 32 | ರಾಯಚೂರು | 116808 |
| 33 | ಯಾದಗಿರಿ | 19745 |
| 34 | ವಿಜಯನಗರ | 100317 |
| ಒಟ್ಟು | | **4154314** |